Compt/Uplok/MYS/908/2020

## ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್/908/2020/ಎಆರ್‌ಎಲ್‌ಓ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:28/06/2021

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3)ರ ಅನ್ವಯ ವರದಿ*

ವಿಷಯ: ಶ್ರೀ. ಮಂಜೇಗೌಡ, ತಹಶೀಲ್ದಾರ್, ತಾಲ್ಲೂಕು ಕಛೇರಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 2. ಶ್ರೀ. ಹನುಮಂತ, ಕಂದಾಯ ನಿರೀಕ್ಷಕರು, ಸಿ.ಎ. ಕೆರೆ ಹೋಬಳಿ, 2ನೇ ವೃತ್ತ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 3. ಶ್ರೀ. ಆಂಜಿನಪ್ಪ, ಗ್ರಾಮ ಲೆಕ್ಕಿಗರು, ಹರಳಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 4. ಶ್ರೀ. ರಾಮಣ್ಣ, ಕಂದಾಯ ನಿರೀಕ್ಷಕರು, ಸಿ.ಎ. ಕೆರೆ ಹೋಬಳಿ, 1ನೇ ವೃತ್ತ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 5. ಶ್ರೀ. ರಾಜಶೇಖರ್, ಗ್ರಾಮ ಲೆಕ್ಕಿಗರು, ಜೆವರಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಎಸಗಿದ ದುರ್ವರ್ತನೆ ಕುರಿತು.

****

ದೂರುದಾರರಾದ ಶ್ರೀ. ಕೆ. ಎಂ. ಶಂಕರ್, ತಂದೆ ಲೇ. ಕೆ.ಎಲ್. ಮಲ್ಲೇಗೌಡ, ಕರಡಕೆರೆ ಗ್ರಾಮ, ಸಿ.ಎ. ಕೆರೆ ಹೋಬಳಿ, ಕರಡಕೆರೆ ಪೋಸ್ಟ್, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ ಶ್ರೀ. ಮಂಜೇಗೌಡ, ತಹಶೀಲ್ದಾರ್, ತಾಲ್ಲೂಕು ಕಛೇರಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 2. ಶ್ರೀ. ಹನುಮಂತ, ಕಂದಾಯ ನಿರೀಕ್ಷಕರು, ಸಿ.ಎ. ಕೆರೆ ಹೋಬಳಿ, 2ನೇ ವೃತ್ತ, ಮದ್ದೂರು

ತಾಲ್ಲೂಕು, ಮಂಡ್ಯ ಜಿಲ್ಲೆ 3. ಶ್ರೀ. ಆಂಜಿನಪ್ಪ, ಗ್ರಾಮ ಲೆಕ್ಕಿಗರು, ಹರಳಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 4. ಶ್ರೀ. ರಾಮಣ್ಣ, ಕಂದಾಯ ನಿರೀಕ್ಷಕರು, ಸಿ.ಎ. ಕೆರೆ ಹೋಬಳಿ, 1ನೇ ವೃತ್ತ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ 5. ಶ್ರೀ. ರಾಜಶೇಖರ್, ಗ್ರಾಮ ಲೆಕ್ಕಿಗರು, ಜೆವರಹಳ್ಳಿ ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

2. ದೂರುದಾರರ ತಂದೆಯಾದ ಶ್ರೀ. ಕೆ.ಎಲ್. ಮಲ್ಲೇಶಗೌಡರ ಹೆಸರಿನಲ್ಲಿ ಮದ್ದೂರು ತಾಲ್ಲೂಕು ಸಿ.ಎ.ಕೆರೆ ಹೋಬಳಿ ಕರಡಕೆರೆ ಗ್ರಾಮದ ಸರ್ವೆ ನಂಬರ್ 100/1, 150/4, 159/ಬಿ, 189/1ಎ ಮತ್ತು 197/4 ಹಾಗೂ ಅರೆಚಾಕನಹಳ್ಳಿ ಗ್ರಾಮದ ಸರ್ವೆ ನಂ. 45 ಮತ್ತು ಅರೆಹಳ್ಳಿ ಗ್ರಾಮದ ಸರ್ವೆ ನಂ. 90ರಲ್ಲಿ ಒಟ್ಟು 12–15 ಎಕರೆ ಆಸ್ತಿ ಇದ್ದು, ಸದರಿ ಶ್ರೀ. ಕೆ.ಎಲ್. ಮಲ್ಲೇಗೌಡರಿಗೆ 7 ಜನ ಗಂಡು ಮಕ್ಕಳು ಮತ್ತು 8 ಜನ ಹೆಣ್ಣು ಮಕ್ಕಳು ಇರುತ್ತಾರೆ. ಆದರೆ, ದೂರುದಾರರ ಅಣ್ಣನಾದ ಶ್ರೀ. ಕೆ.ಎಂ. ನಾಗೇಶರವರು ಒಬ್ಬ ಬ್ರೋಕರ್ ಶ್ರೀ. ಶಂಕರ ಮೆಳಹಳ್ಳಿ ಇವರ ಮೂಲಕ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ರೂ 3,50,000/- ಹಣವನ್ನು ಕೊಡಿಸಿ ದೂರುದಾರರ ತಂದೆಗೆ ಕೇವಲ ಇಬ್ಬರು ಮಕ್ಕಳೆಂದು ಪ್ರಮಾಣ ಪತ್ರ ಸಲ್ಲಿಸಿ 12–15 ಎಕರೆ ಆಸ್ತಿಯನ್ನು ಶ್ರೀ. ಕೆ.ಎಂ.ನಾಗೇಶ್‌ರವರ ಹೆಸರಿಗೆ ಕಾನೂನು ಬಾಹಿರವಾಗಿ ಖಾತೆ ಮಾಡಿಕೊಟ್ಟು ದೂರುದಾರರ ಉಳಿಕೆ ಅಣ್ಣ ತಮ್ಮಂದಿರಿಗೆ ಎದುರುದಾರರು ವಂಚಿಸಿರುತ್ತಾರೆ ಎಂದು ಆಪಾದಿಸಿರುತ್ತಾರೆ. ಎದುರುದಾರರ ಹಣದ ಆಸೆಗೆ ಖಾತೆ ಮಾಡಿಕೊಟ್ಟು ದೂರುದಾರರಿಗೆ ಹಾಗೂ ಅವರ ಇತರ ಸಹೋದರ ಸಹೋದರಿಯರಿಗೆ ವಂಚಿಸಿರುತ್ತಾರೆ, ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಪ್ರಾರ್ಥಿಸಿರುತ್ತಾರೆ.

3. ಗೌರವಾನ್ವಿತ ಉಪಲೋಕಾಯುಕ್ತರವರ ಆದೇಶದನ್ವಯ ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸಲು ಸೂಚಿಸಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

4. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತಾನು ಈ ಹಿಂದೆ ಮದ್ದೂರು ತಾಲ್ಲೂಕು ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪ್ರಸ್ತುತ ನಿವೃತ್ತಿ ಹೊಂದಿರುತ್ತೇನೆ ಎಂದು ತಿಳಿಸಿರುತ್ತಾರೆ. ದೂರಿನ ವಿಚಾರ 1ನೇ ಎದುರುದಾರರ ಗಮನಕ್ಕೆ ಬಂದಾಗ ಮೇಲೆ ಹೇಳಿದ ಎಂ.ಆರ್.ಹೆಚ್ ಆದೇಶ ರದ್ದುಪಡಿಸುವಂತೆ ಉಪವಿಭಾಗಾಧಿಕಾರಿಗಳು ಮಂಡ್ಯ ಇವರಿಗೆ ಸ್ವಯಂ ಪ್ರೇರಿತ ಮೇಲ್ಮನವಿ ಎಂದು ಪರಿಗಣಿಸಿ ಆದೇಶ ನೀಡಲು ವರದಿ ಸಲ್ಲಿಸಿರುತ್ತೇನೆ ಎಂದು ತಿಳಿಸಿರುತ್ತಾರೆ.

5. 1ನೇ ಎದುರುದಾರರು ಮುಂದುವರೆದು, ಭೂ ಕಂದಾಯ ನಿಯಮಾವಳಿ 1966 ನಿಯಮ 66ರಂತೆ ಖಾತೆ ಬದಲಾವಣೆ ಮಾಡುವ ಅಧಿಕಾರ ರಾಜಸ್ವ ನಿರೀಕ್ಷಕರಿಗೆ ಶಾಸನದತ್ತ ಅಧಿಕಾರ ವಿರುತ್ತದೆ ಅದನ್ನು ಪರಿಷ್ಕರಿಸುವ ಅಧಿಕಾರ ತಶೀಲ್ದಾರ್‌ರವರಿಗೆ ಇರುವುದಿಲ್ಲ. ಇದು ಮೇಲ್ಮನವಿ ಸಲ್ಲಿಸುವ ಮುಖಾಂತರ ಪರಿಹಾರ ಕಂಡುಕೊಳ್ಳುವ ಅವಕಾಶವಿರುತ್ತದೆ. ಮಂಡ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆದೇಶ ಸಂಖ್ಯೆ: ಆರ್‌ಮಿಸ್ 323/2016 ಹಾಗೂ ಆರ್‌ಎಂಎಸ್. ನಂ. 172/2017ರಂತೆ ಮೇಲ್ಮನವಿ ದಾಖಲಾಗಿದ್ದು, ಒಂದು ಪ್ರಕರಣದಲ್ಲಿ ಖಾತೆ ಆದೇಶ ರದ್ದು ಮಾಡಲಾಗಿದ್ದು, ಮೇಲ್ಮನವಿ ಸಂಖ್ಯೆ: 172/2017 ವಿಚಾರಣೆ ಹಂತದಲ್ಲಿ ಬಾಕಿ ಇರುತ್ತದೆ. ಖಾತೆ ಮಾಡುವ ಅಧಿಕಾರವು ನನ್ನ ಅಧಿಕಾರ ವ್ಯಾಪ್ತಿಗೆ ಒಳಪಡುವುದಿಲ್ಲ ಹಾಗೂ ಇದರಲ್ಲಿ ನನ್ನ ಪಾತ್ರವಿರುವುದಿಲ್ಲ ಈ ಪ್ರಕರಣದಲ್ಲಿ ನಾನು ಯಾವುದೇ ಆದೇಶ ಮಾಡದೇ ಇರುವುದರಿಂದ ಈ

ಪ್ರಕರಣದಲ್ಲಿ ನನ್ನ ವಿರುದ್ಧ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿರುತ್ತದೆ ಎಂದು 1ನೇ ಎದುರುದಾರರ ವಿರುದ್ಧ ತನಿಖೆ ಕೈಬಿಡಬೇಕೆಂದು ಪ್ರಾರ್ಥಿಸಿರುತ್ತಾರೆ.

6. 2ನೇ ಎದುರುದಾರರು ದಿ. 17/08/2020ರಂದು ತನ್ನ ಆಕ್ಷೇಪಣೆಯನ್ನು ಸಲ್ಲಿಸಿದ್ದು, ದೂರಿನಲ್ಲಿ ಮಾಡಿರುವ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರ ತಮ್ಮನಾದ ಶ್ರೀ. ಕೆ.ಎಂ. ನಾಗೇಶ್‌ರವರ ಕೋರಿಕೆಯಂತೆ ಅವರ ತಂದೆಯವರ ಹೆಸರಿನಲ್ಲಿದ್ದ ಜಮೀನಿನ ಖಾತೆಯನ್ನು ಅವರ ಹೆಸರಿಗೆ ಬದಲಾಯಿಸಲು ನಾನು ಯಾವುದೇ ಲಂಚ ಪಡೆದಿರುವುದಿಲ್ಲ ಮತ್ತು ಶ್ರೀ. ಕೆ.ಎಂ. ನಾಗೇಶ್‌ರವರಿಗೆ ನಾನು ಯಾವುದೇ ವಂಶವೃಕ್ಷವನ್ನು ನೀಡಿರುವುದಿಲ್ಲ. ದಿ. 23/05/2015ರಂದು ಕೆ.ಎಂ. ನಾಗೇಶ್‌ರವರು ಮದ್ದೂರಿನ ಚಿಕ್ಕಣ್ಣ ಎಂಬ ವಕೀಲರ ಮುಂದೆ ತಮ್ಮ ವಂಶವೃಕ್ಷದ ಬಗ್ಗೆ ಪ್ರಮಾಣ ಪತ್ರ ಮಾಡಿದ್ದು, ನೋಟರೀಕೃತ ಪ್ರಮಾಣಪತ್ರವನ್ನು ಕೆ.ಎಂ. ನಾಗೇಶ್‌ರವರು ಖಾತಾ ಬದಲಾವಣೆ ಕೋರಿ ಅರ್ಜಿಯೊಂದಿಗೆ ಲಗತ್ತಿಸಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಕೆ.ಎಂ. ನಾಗೇಶ್‌ರವರು ಇತರ ಸಹೋದರರವರ ಹೆಸರುಗಳನ್ನು ಕಾಣಿಸಿರುವುದಿಲ್ಲ.

7. ನೋಟರೀಕೃತ ಪ್ರಮಾಣ ಪತ್ರವು ಕಾನೂನು ಬದ್ಧ ದಾಖಲೆಯಾಗಿದ್ದು ಇದನ್ನು ದಾಖಲಿಸಿ ಕೆ.ಎಂ. ನಾಗೇಶ್‌ರವರ ಹೆಸರಿಗೆ ಜಮೀನಿನ ಖಾತೆಯನ್ನು ವರ್ಗಾಯಿಸಲಾಗಿದೆ. ನೋಟರಿಯ ಮುಂದೆ ತಮ್ಮ ವಂಶವೃಕ್ಷದ ಬಗ್ಗೆ ಸುಳ್ಳು ಪ್ರಮಾಣ ಮಾಡಿರುವ ಕೆ.ಎಂ. ನಾಗೇಶ್‌ರವರ ಮೇಲೆ ಕಾನೂನು ಕ್ರಮ ಜರುಗಿಸಬೇಕೇ ವಿನಃ ಇದಕ್ಕೆ ನಾನು ಹೊಣೆಗಾರರಾಗಿರುವುದಿಲ್ಲ ಎಂದು ಕಂದಾಯ ನಿರೀಕ್ಷಕರಾದ 2ನೇ ಎದುರುದಾರರು ತಿಳಿಸಿರುತ್ತಾರೆ. 2ನೇ ಎದುರುದಾರರು ಮುಂದುವರೆದು ತಾನು ಮಾಡಿರುವ ಪ್ರಸ್ತುತ ಖಾತಾ ಬದಲಾವಣೆಯ ಆದೇಶವನ್ನು

ಮೇಲ್ಮನವಿಯ ಮೂಲಕ ಪ್ರಶ್ನಿಸಬಹುದಾದ ಆದೇಶವಾಗಿರುತ್ತದೆ. ಯಾವುದೇ ಹಕ್ಕು ಬದಲಾವಣೆ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 136(2)ರಲ್ಲಿ ಉಪವಿಭಾಗಾಧಿಕಾರಿರವರಿಗೆ ಮೇಲ್ಮನವಿ ಸಲ್ಲಿಸಬಹುದಾಗಿರುತ್ತದೆ. ಯಾವುದೇ ಆದೇಶದಿಂದ ಬಾದಿತನಾದ ವ್ಯಕ್ತಿ ಅಂತಹ ಆದೇಶವನ್ನು ಮೇಲ್ಮನವಿಯ ಮುಖಾಂತರ ಪ್ರಶ್ನಿಸಿ ಪರಿಹಾರವನ್ನು ಕಂಡುಕೊಳ್ಳಲು ಅವಕಾಶವಿದ್ದಲ್ಲಿ ಅಂತಹ ಆದೇಶದ ಕುರಿತಾದ ಯಾವುದೇ ದೂರುಗಳನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತರವರು ತನಿಖೆ ಮಾಡಬಾರದೆಂದು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 1(ಬಿ)ಯಲ್ಲಿ ನಿರ್ದೇಶಿಸಿರುತ್ತದೆ ಎಂದು ತಿಳಿಸಿರುತ್ತಾರೆ.

8. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮುಂದುವರೆದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರ ಸಹೋದರರಲ್ಲೊಬ್ಬರಾದ ಶ್ರೀ. ಕೆ.ಎಂ.ಶಿವಸ್ವಾಮಿಯವರು 2ನೇ ಎದುರುದಾರರು ಮಾಡಿದ ಖಾತಾ ಬದಲಾವಣೆ ಆದೇಶ ಸಂಖ್ಯೆ: ಎಂ.ಆರ್.ನಂ. ಹೆಚ್. 14/2015-16ನ್ನು ಪ್ರಶ್ನಿಸಿ ಮಂಡ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: ಆರ್‌ಮಿಸ್ ನಂ. 172/2017ರನ್ವಯ ಮೇಲ್ಮನವಿ ದಾಖಲಿಸಿದ್ದು, ಅದು ವಿಚಾರಣಾ ಹಂತದಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ.

9. 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮುಂದುವರೆದು, ಕಂದಾಯ ನಿರೀಕ್ಷಕರಿಗೆ ಖಾತಾ ಬದಲಾವಣೆ ಮಾಡಲು ಕರ್ನಾಟಕ ಭೂಕಂದಾಯ ನಿಯಮಾವಳಿ 1966ರ ನಿಯಮ 66ರ ಶಾಸನದತ್ತ ಅಧಿಕಾರ ನೀಡಿರುತ್ತದೆ. ಇದು ಶಾಸನದತ್ತ ಅರೆ-ನ್ಯಾಯಿಕ (quasi Judicial) ಸ್ವರೂಪದ ಅಧಿಕಾರವಾಗಿದ್ದು, ಇಂತಹ ಅಧಿಕಾರವನ್ನು ಚಲಾಯಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು

ಕಾನೂನು ಬಾಹಿರವೆಂದು ಕರ್ನಾಟಕ ಆಡಳಿತ ನ್ಯಾಯಮಂಡಳಿಯ "ಸುದರ್ಶನ್ ಕೆ.ಟಿ.ರವರ ವಿರುದ್ಧ ರಾಜ್ಯ ಸರ್ಕಾರ" ಪ್ರಕರಣದಲ್ಲಿ ತೀರ್ಪು ನೀಡಿರುತ್ತದೆ ಎಂದು ತಿಳಿಸಿರುತ್ತಾರೆ. ಇಂತಹ ಅಧಿಕಾರಿಗಳ ವಿರುದ್ಧ ಆರಂಭಿಸಿದ ಶಿಸ್ತುಕ್ರಮವನ್ನು ಎತ್ತಿ ಹಿಡಿದಿದ್ದಲ್ಲಿ ಅದು ಅಧಿಕಾರಿಗಳಿಗೆ ಶಾಸನವು ನೀಡಿದ ಸ್ವತಂತ್ರ ಅಧಿಕಾರ ಚಲಾವಣೆಗೆ ನೇರ ಬೆದರಿಕೆ ಒಡ್ಡಿದಂತಾಗುತ್ತದೆ ಎಂದು ಸಹ ಕೆ.ಎ.ಟಿಯು ಅಭಿಪ್ರಾಯ ಪಟ್ಟಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

10. 3ನೇ ಎದುರುದಾರರು ದಿ. 31/08/2020ರಂದು ತನ್ನ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ ದೂರುದಾರರು ಸಹೋದರ ಶ್ರೀ. ಕೆ.ಎಂ.ನಾಗೇಶ್‌ರವರು ದಿ. 11/03/2016ರಂದು ಸಲ್ಲಿಸಿದ ಅರ್ಜಿಯ ಮೇರೆಗೆ ಖಾತಾ ಬದಲಾವಣಾ ಪ್ರಕ್ರಿಯೆಯಲ್ಲಿ ಮದ್ದೂರು ತಾಲ್ಲೂಕು ಕಛೇರಿಯಿಂದ ಬಂದಂತಹ ಎಂ.ಆರ್.ವಹಿಯ ನಮೂನೆ 12ರ ಪ್ರತಿಯನ್ನು ಅಯಾ ಗ್ರಾಮಗಳ ಚಾವಡಿಯಲ್ಲಿ ಪ್ರದರ್ಶಿಸಲು ಮತ್ತು ನಮೂನೆ 21ರ ನೋಟೀಸನ್ನು ಹಿತಾಸಕ್ತಿದಾರರಿಗೆ ಜಾರಿ ಮಾಡಲು ಕ್ರಮ ಕೈಗೊಂಡು ರಾಜಸ್ವ ನಿರೀಕ್ಷಕರಿಗೆ ವರದಿ ಸಲ್ಲಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ತರುವಾಯ ರಾಜಸ್ವ ನಿರೀಕ್ಷಕರು ಖಾತಾ ಬದಲಾವಣೆಯನ್ನು ಅಂಗೀಕರಿಸಿ ತಾಲ್ಲೂಕು ಕಛೇರಿಗೆ ವರದಿ ಮಾಡಿರುತ್ತಾರೆ. ತಾಲ್ಲೂಕು ಕಛೇರಿಯ ಭೂಮಿ ಶಾಖೆಯ ಗಣಕಯಂತ್ರದಲ್ಲಿ ಅಂಗೀಕೃತ ಖಾತಾ ಬದಲಾವಣೆ ಆದೇಶವು ಅಪ್‌ಲೋಡ್ ಆಗಿ ರಾಜಸ್ವ ನಿರೀಕ್ಷಕರ ಹೆಬ್ಬೆರಳಿನ ಮುದ್ರೆಯನ್ನು ಒತ್ತುವ ಮೂಲಕ ಅನುಮೋದನೆ ನೀಡಿದ ಬಳಿಕ ಅರ್ಜಿದಾರರ ಹೆಸರು ಗಣಕೀಕೃತ ಆರ್.ಟಿ.ಸಿಗೆ ವರ್ಗಾವಣೆಯಾಗಿರುತ್ತದೆ. 3ನೇ ಎದುರುದಾರರು, ದೂರುದಾರರ ಸಹೋದರರ ನಾಗೇಶ್‌ರವರಿಂದ ಲಂಚ ಪಡೆದಿರುವುದಿಲ್ಲ, ಖಾತಾ

ಬದಲಾವಣೆಯ ಪ್ರಕ್ರಿಯೆಯಲ್ಲಿ ತಾಲ್ಲೂಕು ಕಛೇರಿಯಿಂದ ಜನರೇಟ್ ಆಗಿ ಬಂದಂತಹ ಎಂ.ಆರ್.ವಹಿಯ ನಮೂನೆ 12ರ ಪ್ರತಿಯನ್ನು ಆಯಾ ಗ್ರಾಮಗಳ ಛಾವಡಿಯಲ್ಲಿ ಪ್ರದರ್ಶಿಸುವುದು ಮತ್ತು ನಮೂನೆ 21ರ ನೋಟಿಸ್‌ನ್ನು ಹಿತಾಸಕ್ತ ವ್ಯಕ್ತಿಗಳಿಗೆ ಜಾರಿ ಮಾಡುವುದಷ್ಟೇ ತನ್ನ ಜವಾಬ್ದಾರಿ ಸೀಮಿತವಾಗಿದೆಯೇ ವಿನಃ ಖಾತಾ ಬದಲಾವಣೆಯ ಅಧಿಕಾರ ನನಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. 3ನೇ ಎದುರುದಾರರ ಆಕ್ಷೇಪಣೆಯ ಮುಂದಿನ ಭಾಗದಲ್ಲಿ 2ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನೇ ಪುನರುಚ್ಚರಿಸಿರುತ್ತಾರೆ. ಮುಂದುವರೆದು ದೂರುದಾರರ ಸಹೋದರನಾದ ಶ್ರೀ. ಕೆ.ಎಂ. ಶಿವಸ್ವಾಮಿಯವರು ತಮ್ಮ ತಂದೆ ಮಲ್ಲೇಗೌಡರ ಸ್ವತ್ತುಗಳಲ್ಲಿ ತಮಗೆ ಬರಬೇಕಾದ ಹಿಸ್ಸೆ ಕೇಳಿ ಮದ್ದೂರು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ ಓ.ಎಸ್. 141/2013ರನ್ವಯ ದಾವೆ ಹೂಡಿದ್ದು, ದಿ. 16/01/2018ರಂದು ಸದರಿ ದಾವೆಯಲ್ಲಿ ತೀರ್ಪು ಆಗಿರುತ್ತದೆ. ಡಿಕ್ರಿ ಪ್ರಕಾರ ದೂರುದಾರರು ದಾವಾ ಸ್ವತ್ತಿನಲ್ಲಿ 16/120ನೇ ಭಾಗಾಂಶಕ್ಕೆ ಅರ್ಹರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಕರಣವನ್ನು ಮುಕ್ತಾಯ ಮಾಡಲು ಕೋರಿರುತ್ತಾರೆ.

11. 4ನೇ ಎದುರುದಾರರು ದಿ. 17/12/2020ರಂದು ತನ್ನ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ತಾನು ಈ ಹಿಂದೆ ಸಿ.ಎ.ಕೆರೆಹೋಬಳಿಯ 1ನೇ ವೃತ್ತ ಮದ್ದೂರು ತಾಲ್ಲೂಕು ರಾಜಸ್ವ ನಿರೀಕ್ಷಕರಾಗಿ ಕೆಲಸ ನಿರ್ವಹಿಸಿದ್ದು, ದೇವರಹಳ್ಳಿ ಗ್ರಾಮ ನನ್ನ ವೃತ್ತಕ್ಕೆ ಸಂಬಂಧಪಟ್ಟದ್ದಾಗಿದ್ದು, ದೂರು ಅರ್ಜಿಯಲ್ಲಿ ಸದರಿ ಗ್ರಾಮದ ಸರ್ವೆ ನಂಬರ್ ಸೇರಿರುವುದಿಲ್ಲ. ಪೌವತಿ ಖಾತೆ ಅರ್ಜಿಯನ್ನು ತಾಲ್ಲೂಕು ಕಛೇರಿಯ ಕಂಪ್ಯೂಟರ್ ಆಪರೇಟರ್‌ಗೆ ಚಾಲ್ತಿ ಸಾಲಿನ ಗಣಕೀಕೃತ 1. ಆರ್.ಟಿ.ಸಿ 2. ಅಫಿಡವಿತ್ ವಂಶವೃಕ್ಷ 3. ಮರಣ ದೃಢೀಕರಣ ಪತ್ರ ಫಾರಂ

ನಂ. 12 ಮತ್ತು 21ರ ಚೆಕ್ ಲಿಸ್ಟ್ ಹೊರಡಿಸಿರುತ್ತಾರೆ. ಕಡತವು ರಾಜಸ್ವ ನಿರೀಕ್ಷಕರ ಮುಖಾಂತರ ಸಂಬಂಧ ಪಟ್ಟ ಗ್ರಾಮ ಲೆಕ್ಕಾಧಿಕಾರಿಗಳಿಗೆ ಹೋಗಿರುತ್ತದೆ. ಅಂದಿನ ದೇವರಹಳ್ಳಿ ಗ್ರಾಮ ಲೆಕ್ಕಿಗರು ನಮೂನೆ 12 ಮತ್ತು ನಮೂನೆ 21ನ್ನು ಪ್ರಚೂರಪಡಿಸಿ ಸಂಬಂಧಪಟ್ಟ ಹಿತಾಸಕ್ತರು ಹಾಗೂ ಗ್ರಾಮಸ್ಥರಿಂದ ಸಹಿ ಪಡೆದು ಕಡತವನ್ನು ಪರಿಶೀಲಿಸಿ ಯಾವುದೇ ತಂಟೆ ತಕರಾರು ಬಂದಿರುವುದಿಲ್ಲವೆಂದು ಪೌವತಿ ಖಾತೆ ಅಂಗೀಕರಿಸಲು ಶಿಫಾರಸ್ಸು ಮಾಡಿರುತ್ತಾರೆ. ಗ್ರಾಮ ಲೆಕ್ಕಾಧಿಕಾರಿಗಳ ವರದಿಯಂತೆ ರಾಜಸ್ವ ನಿರೀಕ್ಷಕರಾದ ನಾನು ಸಹಿ ಮಾಡಿ ತಾಲ್ಲೂಕು ಕಛೇರಿಯ ಭೂಮಿ ಶಾಖೆಗೆ ಕಳುಹಿಸಿಕೊಟ್ಟಿರುತ್ತೇನೆ. ಇದರಲ್ಲಿ ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳೇ ಹೊಣೆಗಾರರಾಗಿದ್ದು ನನ್ನ ಯಾವುದೇ ರೀತಿ ಹೊಣೆಗಾರಿಕೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಸಿ.ಎ.ಕೆರೆ ಹೋಬಳಿಯು 2ನೇ ವೃತ್ತದ ಕರಡಕೆರೆ ಗ್ರಾಮಕ್ಕೆ ಸೇರಿರುತ್ತದೆ, ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಹಾಗೂ ನಾನು ಯಾವುದೇ ರೀತಿ ಹೊಣೆಗಾರನಾಗಿರುವುದಿಲ್ಲ ಹಾಗೂ ನಾನು ದೂರುದಾರರ ಸಹೋದರನಿಂದ ಯಾವುದೇ ಲಂಚ ಸ್ವೀಕರಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

12. 5ನೇ ಎದುರುದಾರರು ದಿ. 31/08/2020ರಂದು ತನ್ನ ಆಕ್ಷೇಪಣೆಯನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಯಲ್ಲಿ ತಾನು ಮದ್ದೂರು ತಾಲ್ಲೂಕಿನ ಕಾಡುಕೊತ್ತನಹಳ್ಳಿ ಗ್ರಾಮಲೆಕ್ಕಿಗನಾಗಿದ್ದು, ದೇವರಹಳ್ಳಿ ವೃತ್ತದ ಅಧಿಕ ಪ್ರಭಾರ ನಿರ್ವಹಿಸುತ್ತಿದ್ದಾಗ 2016ರಲ್ಲಿ ಸದರಿ ಗ್ರಾಮದ ಸರ್ವೆ ನಂ. 991/ಬಿನಲ್ಲಿರುವ 0.39½ ಗುಂಟೆ ಜಮೀನಿನ ಖಾತಾ ಬದಲಾವಣೆಗೆ ಸಂಬಂಧಿಸಿದಂತೆ ನಡೆದ ಪ್ರಕ್ರಿಯೆಯಲ್ಲಿ ತಾಲ್ಲೂಕು ಕಚೇರಿಯಿಂದ ಬಂದಂತಹ ಎಂ.ಆರ್.ವಹಿಯ ನಮೂನೆ

12ರ ಪ್ರತಿಯನ್ನು ಗ್ರಾಮದ ಛಾವಡಿಯಲ್ಲಿ ಪ್ರದರ್ಶಿಸಲು ಮತ್ತು ನಮೂನೆ 21ರ ನೋಟೀಸನ್ನು ಹಿತಾಸಕ್ತರಿಗೆ ಜಾರಿ ಮಾಡಲು ಅಗತ್ಯ ಕ್ರಮ ಕೈಗೊಂಡು ರಾಜಸ್ವ ನಿರೀಕ್ಷಕರಿಗೆ ವರದಿ ಸಲ್ಲಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. 5ನೇ ಎದುರುದಾರರು ಮುಂದುವರೆದು 2ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನೇ ಪುನರುಚ್ಚರಿಸಿರುತ್ತಾರೆ.

13. ದೂರುದಾರರು ದಿ. 13/01/2021ರಂದು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಸದರಿ ಪ್ರತ್ಯುತ್ತರದಲ್ಲಿ ದೂರಿನಲ್ಲಿ ಮಾಡಿರುವ ಆಪಾದನೆಗಳನ್ನು ಪುನರುಚ್ಚರಿಸಿರುತ್ತಾರೆ. ಸರ್ಕಾರದ ನಿಯಮ ಪ್ರಕಾರ ಯಾವುದೇ ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಸಹಾಯಕರು ಆ ಗ್ರಾಮದಲ್ಲಿರುವ ಪ್ರತಿ ಕುಟುಂಬದ ವಿವರಗಳನ್ನು ಒಳಗೊಂಡಂತೆ ನೈಜಸ್ಥಿತಿಯನ್ನು ಅವರುಗಳ ಮೇಲಾಧಿಕಾರಿಗಳಿಗೆ ತಿಳಿಸುವುದು ಅವರ ಕರ್ತವ್ಯವಾಗಿರುತ್ತದೆ. ಆಯಾ ಗ್ರಾಮದ ಗ್ರಾಮಸ್ಥರುಗಳು ಸರ್ಕಾರಿ ನಿಯಮದ ಪ್ರಕಾರ ಆ ಗ್ರಾಮದಲ್ಲಿ ವಾಸ್ತವ್ಯವಿರದೆ ಭಾರತಿ ನಗರದಲ್ಲಿ ವಾಸ್ತವ್ಯದಲ್ಲಿದ್ದು, ಅವರು ಭ್ರಷ್ಟಾಚಾರದಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಅವರು ಪ್ರತಿ ಗ್ರಾಮದಲ್ಲಿ 2-3 ಬ್ರೋಕರ್‌ಗಳನ್ನು ಇಟ್ಟುಕೊಂಡು ಖಾತಾ ಬದಲಾವಣೆಯನ್ನು ಮಾಡಿಕೊಡುವುದು, ಮಾಸಾಶನವನ್ನು ಕೊಡಿಸುವುದು, ವೃದ್ಯಾಪ್ಯವೇತನ ಕೊಡಿಸುವುದು ಮುಂತಾದ ವ್ಯವಹಾರಗಳನ್ನು ಗ್ರಾಮದಿಂದ ದೂರವಿದ್ದು ಮಾಡಿಕೊಂಡಿರುವುದು ಪರಿಪಾಟವಾಗಿದ್ದು, ವಿಷಾದನೀಯ ಸಂಗತಿಯಾಗಿರುತ್ತದೆ. ಯಾವುದೇ ಖಾತೆ ಬದಲಾವಣೆಯ ವಿಚಾರಣೆಯಲ್ಲಿ ಗ್ರಾಮ ಲೆಕ್ಕಿಗರಿಗೆ ನಮೂನೆ 21ರ ಜೊತೆ ಅಗತ್ಯ ದಾಖಲೆಗಳಾದ ವಂಶವೃಕ್ಷ ಮತ್ತು ಆ ವಂಶವೃಕ್ಷದಂತೆ ಆ ಕುಟುಂಬದಲ್ಲಿರುವ ಜನರ ಬಗ್ಗೆ ಖಾತ್ರಿಪಡಿಸಿಕೊಂಡ ನಂತರ ನಮೂನೆ 21ರ ಮೇರೆಗೆ ಆ ಗ್ರಾಮದ ಸ್ಥಳೀಯರ ಹಾಜರಾತಿಯಲ್ಲಿ ಖಾತಾ ಬದಲಾವಣೆ ಮಾಡುವ

ಬಗ್ಗೆ ಸಹಿಯನ್ನು ಪಡೆದು ನಮೂನೆ 21ನ್ನು ಆ ಗ್ರಾಮದಲ್ಲಿರುವ ಗ್ರಾಮ ಲೆಕ್ಕಿಗರು ಕಛೇರಿಯ ನೋಟೀಸ್ ಬೋರ್ಡ್‌ನಲ್ಲಿ ಹಾಕುವುದು ಅಧಿಕಾರಿಯ ನಿಯಮವಾಗಿರುತ್ತದೆ. ಆದರೆ ಗ್ರಾಮ ಲೆಕ್ಕಿಗರು ತಮ್ಮ ಆಕ್ಷೇಪಣೆಯಲ್ಲಿ ತಪ್ಪು ಸ್ಪಷ್ಟನೆ ನೀಡಿರುತ್ತಾರೆ.

14. ನಮೂನೆ 12ರ ಪ್ರತಿಯನ್ನು ಆಯಾ ಗ್ರಾಮದ ಚಾವಡಿಯಲ್ಲಿ ಪ್ರದರ್ಶಿಸುವುದು ವಾಡಿಕೆಯಾಗಿದೆ. ಆದರೆ ಗ್ರಾಮ ಲೆಕ್ಕಿಗರು ಗ್ರಾಮ ಛಾವಡಿಯಲ್ಲಿ ನಮೂನೆ 12ರ ಪ್ರತಿಯನ್ನು ಪ್ರದರ್ಶಿಸಿರುವುದಕ್ಕೆ ಯಾವುದೇ ಪುರಾವೆಗಳು ಇರುವುದಿಲ್ಲ. ಗ್ರಾಮ ಲೆಕ್ಕಿಗರು ಅಣ್ಣ ತಮ್ಮಂದಿರ ಒಪ್ಪಿಗೆ ಸಹಿ ಪಡೆಯದೆ ಖಾತಾ ಬದಲಾವಣೆ ಮಾಡಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದು ಇವರ ಕರ್ತವ್ಯ ಲೋಪವಾಗಿರುತ್ತದೆ. ಕಂದಾಯ ಇಲಾಖೆಯ ಅಧಿಕಾರಿಗಳು ಎಸಗಿರುವ ಕರ್ತವ್ಯ ಲೋಪಕ್ಕೆ ದೂರುದಾರರ ಅಣ್ಣತಮ್ಮಂದಿರು ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಅಪೀಲು ಸಲ್ಲಿಸುವ ಪ್ರಸಂಗವೇ ಬರುವುದಿಲ್ಲ. ಇದು ಆ ಗ್ರಾಮದ ಗ್ರಾಮ ಲೆಕ್ಕಾಧಿಕಾರಿ ಹಾಗೂ ಆರ್.ಐ ಮತ್ತು ತಹಶೀಲ್ದಾರ್‌ರವರ ಭ್ರಷ್ಟಾಚಾರದ ಹೊಣೆಗಾರಿಕೆಯಾಗಿರುತ್ತದೆ. ಎದುರುದಾರರು ಅರೆನ್ಯಾಯಿಕ ನಡೆವಳಿಕೆಯನ್ನು ಪ್ರಸ್ತಾಪ ಮಾಡಿ ನೈಜ ಸ್ಥಿತಿಯ ಸತ್ಯಾಂಶದಿಂದ ಭ್ರಷ್ಟಾಚಾರವೆಸಗಿ ಹೊರಬರಲು ಹವಣಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಇಂತಹ ಬಹುತೇಕ ಭ್ರಷ್ಟಾಚಾರದಲ್ಲಿ ಖಾತಾ ಬದಲಾವಣೆಗಳು ಅತಿಯಾಗಿ ನಡೆಯುವುದಕ್ಕೆ ನಿಬಂಧನೆ ಹಾಕಬೇಕೆಂದು ದೂರುದಾರರು ಕೋರಿರುತ್ತಾರೆ. ಗ್ರಾಮ ಲೆಕ್ಕಾಧಿಕಾರಿಯು ನಮೂನೆ 21ರ ನೋಟೀಸನ್ನು ಹಿತಾಸಕ್ತರಿಗೆ ಜಾರಿ ಮಾಡಲು ಅಗತ್ಯ ಕ್ರಮ ಕೈಗೊಂಡು ರಾಜಸ್ವ ನಿರೀಕ್ಷಕರಿಗೆ ವರದಿ ಸಲ್ಲಿಸಿರುತ್ತೇನೆಂದು ತಿಳಿಸಿರುತ್ತಾರೆ. ಆದರೆ ನಮೂನೆ 21ನ್ನು

ಹಿತಾಸಕ್ತರಿಗೆ ಜಾರಿ ಮಾಡಿರುವ ಬಗ್ಗೆ ಯಾವುದೇ ಪುರಾವೆಯನ್ನು ಸಲ್ಲಿಸಿರುವುದಿಲ್ಲ.

15. ಎದುರುದಾರರು ಕಂದಾಯ ಅಧಿಕಾರಿಗಳಾಗಿ ಜವಾಬ್ದಾರಿಯುತ ಕರ್ತವ್ಯ ನಿರ್ವಹಿಸದೆ ಕರ್ತವ್ಯಲೋಪದಿಂದ ತಪ್ಪಿಸಿಕೊಳ್ಳಲು ಉಪವಿಭಾಗಾಧಿಕಾರಿಗಳಿಗೆ ಅಪೀಲು ಸಲ್ಲಿಸಿ ಪರಿಹಾರ ಮಾರ್ಗವಿರುತ್ತದೆ ಎಂದು ಕಾರಣ ಹೇಳುತ್ತಿರುವುದು ಕಂಡುಬಂದಿರುತ್ತದೆ. ಆದುದರಿಂದ ಎದುರುದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

16. ಈ ಪ್ರಕರಣದಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರ ತಂದೆಯಾದ ಶ್ರೀ. ಕೆ.ಎಲ್. ಮಲ್ಲೇಶಗೌಡರಿಗೆ 7 ಜನ ಗಂಡು ಮಕ್ಕಳು ಮತ್ತು 8 ಜನ ಹೆಣ್ಣು ಮಕ್ಕಳು ಇದ್ದು, ಕಂದಾಯ ಇಲಾಖೆಯ ಅಧಿಕಾರಿಗಳು ರೂ 3,50,000/- ಹಣವನ್ನು ಒಬ್ಬ ಬ್ರೋಕರ್ ಶ್ರೀ. ಶಂಕರ ಮೆಳಹಳ್ಳಿ ಇವರ ಮೂಲಕ ದೂರುದಾರರ ಅಣ್ಣನಾದ ಶ್ರೀ. ಕೆ.ಎಂ. ನಾಗೇಶನಿಂದ ಕೊಡಿಸಿ ದೂರುದಾರರ ತಂದೆಗೆ ಕೇವಲ ಇಬ್ಬರು ಮಕ್ಕಳೆಂದು ಪ್ರಮಾಣ ಪತ್ರ ಸಲ್ಲಿಸಿ ದೂರುದಾರರು ತಂದೆಯ ಹೆಸರಿನಲ್ಲಿದ್ದ ಆಸ್ತಿಯನ್ನು ಅವರ ಮರಣದ ನಂತರ ಶ್ರೀ. ಕೆ.ಎಂ.ನಾಗೇಶ್‌ರವರ ಹೆಸರಿಗೆ ಖಾತೆ ಮಾಡಿಕೊಟ್ಟು ದೂರುದಾರರ ಉಳಿಕೆ ಅಣ್ಣ ತಮ್ಮಂದಿರಿಗೆ ಎದುರುದಾರರು ವಂಚಿಸಿರುತ್ತಾರೆ ಎಂದು ಆಪಾದಿಸಿರುತ್ತಾರೆ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಸದರಿ ಖಾತಾ ಬದಲಾವಣೆಯ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಅವಕಾಶವಿರುತ್ತದೆ. ಆದುದರಿಂದ ಈ ಪ್ರಕರಣದಲ್ಲಿ ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ. 8(1)(ಬಿ) ಪ್ರಕಾರ

ಕಾನೂನಿನಲ್ಲಿ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದುದರಿಂದ ಪ್ರಕರಣವನ್ನು ಮುಕ್ತಾಯ ಗೊಳಿಸಲು ಕೋರಿರುತ್ತಾರೆ.

17. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಪ್ರಕರಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ. 8(1)(ಬಿ)ರಡಿಯಲ್ಲಿ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ ಎಂದು ಪ್ರತಿರಕ್ಷೆ ತೆಗೆದುಕೊಂಡಿರುವುದರಿಂದ ಲೋಕಾಯುಕ್ತ ಕಾಯ್ದೆ ಕಲಂ. 8(1)(ಬಿ) ಯಾವ ತರಹದ ಪ್ರಕರಣಗಳಿಗೆ ಸಂಬಂಧಿಸುತ್ತವೆ ಎಂಬ ಬಗ್ಗೆ ಪರಾಮರ್ಶಿಸುವುದು ಸೂಕ್ತವಾಗಿರುತ್ತದೆ. ಅದೇ ರೀತಿ ಲೋಕಾಯುಕ್ತ ಕಾಯ್ದೆಯಲ್ಲಿ ಕುಂದುಕೊರತೆ (grievance) ಮತ್ತು ಆರೋಪ (allegation) ಎಂಬ ಪದಗಳ ವಿವರಣೆಯನ್ನು ಅರ್ಥೈಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.2 (2)ರಲ್ಲಿ ಆರೋಪ (allegation) ಪದದ ಬಗ್ಗೆ ವಿವರಣೆ ನೀಡಿದ್ದು, ಕಲಂ. 2 (8) ರಲ್ಲಿ ಕುಂದುಕೊರತೆ (grievance)ಯ ಬಗ್ಗೆ ವಿವರಣೆ ನೀಡಿರುತ್ತದೆ.

The section 8(1)(b) reads as follows:

Section 8: Matters not subject to investigations- (1) except as herein after provided, the Lokayukta or an Upalokayukta shall not conduct any investigation under this Act in the case of a complaint involving a **grievance** in respect of any action-

(b) If the complainant has or had, any remedy by way of appeal, revision, review or other proceedings before any tribunal, [court officer or other authority and has not availed of the same.]

The word **"allegation"** is defined u/s. 2(2) of Karnataka Lokayukta Act 1984.

The word **"allegation"** in relation to a public servant means any affirmation that such public servant-

a) has abused his position as such public servant to obtain any gain or favour to himself or to any other person or to cause undue harm or hardship to any other person;
b) was actuated in the discharge of his functions as such public servant by personal interest or improper or corrupt motives;
c) is guilty of corruption, favouritism, nepotism, or lack of integrity in his capacity as such public servants;
   OR
d) has failed to act in accordance with the norms of intrigirty and conduct which ought to be followed by public servants of the class which he belongs;

The word "**grievance"** is defined u/s. 2(8) of Karnataka Lokayukta Act 1984. The word **"grievance"** means a claim by a person that he sustained injustice or undue hardship in consequence of maladministration.

18. ಈ ಪ್ರಕರಣದಲ್ಲಿ ದೂರುದಾರರು ಮಾಡಿರುವ ಆರೋಪವು ಎದುರುದಾರರು ದೂರುದಾರರ ತಂದೆಯಾದ ಶ್ರೀ. ಕೆ.ಎನ್. ಮಲ್ಲೇಶ್‌ಗೌಡರಿಗೆ 7 ಜನ ಗಂಡು ಮಕ್ಕಳು ಮತ್ತು 8 ಜನ ಹೆಣ್ಣು ಮಕ್ಕಳಿದ್ದು ಎದುರುದಾರರು ಒಬ್ಬ ಮಧ್ಯವರ್ತಿದಾರರಾದ ಶ್ರೀ. ಶಂಕರ್ ಮೆಳಹಳ್ಳಿರವರ ಮೂಲಕ ದೂರುದಾರರ ಅಣ್ಣನಾದ ಶ್ರೀ. ಕೆ.ಎಂ.ನಾಗೇಶ್‌ರವರಿಂದ 3,50,000/-ಗಳನ್ನು ಪಡೆದು

ದೂರುದಾರರ ತಂದೆಗೆ ಇಬ್ಬರೇ ಮಕ್ಕಳೆಂದು ಪ್ರಮಾಣ ಪತ್ರ ಸಲ್ಲಿಸಿ ದೂರುದಾರರ ತಂದೆಯ ಹೆಸರಿನಲ್ಲಿದ್ದ ಆಸ್ತಿಯನ್ನು ವಾರಿಸುನೆಲೆಯಲ್ಲಿ ಕೇವಲ ಶ್ರೀ. ನಾಗೇಶ್‌ರವರ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿಕೊಟ್ಟಿರುತ್ತಾರೆಂದು ಆಪಾದಿಸಿರುವುದರಿಂದ ಈ ಪ್ರಕರಣದಲ್ಲಿ ಮಾಡಿರುವ ಅಂಶವು ಎದುರುದಾರರ ವಿರುದ್ಧ ಮಾಡಿರುವ ಆರೋಪ(allegation)ಆಗಿರುತ್ತದೆಯೇ ಹೊರತು, ಕುಂದುಕೊರತೆ ಆಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಎದುರುದಾರರು ಪ್ರತಿಪಾದಿಸಿದಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ. 8(1)(ಬಿ) ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.

19. ಈ ಪ್ರಕರಣದಲ್ಲಿ ಎದುರುದಾರರಾದ ಗ್ರಾಮ ಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರು ತಮ್ಮ ಆಕ್ಷೇಪಣೆಗಳಲ್ಲಿ ಖಾತಾ ಬದಲಾವಣೆ ಮಾಡಲು ಕಂದಾಯ ನಿರೀಕ್ಷಕರಿಗೆ ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 66ರಲ್ಲಿ ಶಾಸನಬದ್ಧ ಅಧಿಕಾರ ನೀಡಲಾಗಿರುತ್ತದೆ ಇದು ಶಾಸನದತ್ತ ಅರೆ–ನ್ಯಾಯಿಕ (quasi Judicial) ಸ್ವರೂಪದ ಅಧಿಕಾರವಾಗಿರುವುದರಿಂದ ಇಂತಹ ಅಧಿಕಾರವನ್ನು ಚಲಾಯಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವುದು ಕಾನೂನು ಬಾಹಿರವೆಂದು ಕರ್ನಾಟಕ ಆಡಳಿತ ಮಂಡಳಿಯು ಸುದರ್ಶನ್ ಕೆ.ಟಿ.ರವರ ವಿರುದ್ಧ ರಾಜ್ಯ ಸರ್ಕಾರ ತೀರ್ಪಿನಲ್ಲಿ ತಿಳಿಸಿರುತ್ತದೆ ಎಂದು ಪ್ರತಿರಕ್ಷೆ ತೆಗೆದುಕೊಂಡಿರುತ್ತಾರೆ. ಸದರಿ ತೀರ್ಪಿನ ಭಾಗ ಈ ಕೆಳಕಂಡಂತೆ ಇರುತ್ತದೆ.

> *"The facts are these which have lead to the present application.*
>
> *The applicant entered the service of the State as Tahasildar and was promoted as a Special Assistant Commissioner for Land Reforms, Badami in Bijapur District in June 1975 where he worked till May, 1979. He was functioning as Chairman of Land Tribunal, Badami, Land Tribunal, Hungagound and Land Tribunal, Jamakhandi. For some time he was also functioning as Chairman of Land Tribunal, Muddebihal and Land Tribunal, Bilge. During that period, more than a thousand orders were passed by those Land Tribunals. The Deputy Commissioner, Bijapur, was periodically reviewing the work done by the Land*

*Tribunals and fixing targets of disposal for each Land Tribunal. Cases had to be decided speedily in order to achieve the target. In a large number of cases in which the members could not agree with the decision, the applicant had been compelled to write dissenting order. He has alleged that to the best of his information, in none of the cases in which the orders of the Tribunal were challenged in writ proceedings, the Hon'ble Court had passed any adverse comments on him, Government had not called for his remarks/explanation in respect of any order passed by those Land Tribunals during the said period when he presided over such Land Tribunals. 12 years after he ceased to be the Chairman of the Land Tribunal, he received a notice dated 15.03.1991 under rule 11 of the Karnataka Civil Services (Classification, Control & Appeal) Rules, 19857 (for short 'CCA' Rules) along with an Article of charge, which reads as follows:*

> *"you Sri. K.T.Sudarshan, the then Chairman, Land Tribunal, Badami received tenancy application in Form No 7 from 3 persons on 09/07/1976 though the last date for received of applications was 30.06.76 and disposed of the applications on the same day though the provisions of the K.L.R Act 1961 were not applicable to the Sy.No. 111 (a Government land) of Jalageri village, thus you exceeded your power and failed to scrutinise the applications as to whether the survey number mentioned in the application form attracts the provisions of K.L.R Act 1961, whether public notice in Form No. 8 and individual notices in Form No. 9 were issued as required under Section. 48A(2) of the K.L.R Act, 1961 read with rule 19 of the date fixed for hearing. Thus you discharged your duties in hasty manner, without applying your prudence which constitute grave official misconduct making you liable for disciplinary action under the provisions of K.C.S (CCA) Rule 1957. Hence the charge."*

*Aggrieved by the charge, he approached this Tribunal, inter-alia, contending that the same was without jurisdiction and erroneous..........*

*Mr. Motiga, learned Government Advocate strenuously contended that the charge which we have extracted earlier, left no doubt in one's mind that the Chairman did not act in conformity with the law laid down by the High Court and the procedure prescribed by the Karnataka Land Reforms Rules (for short 'KLR rules') and, therefore, he was guilty of misconduct. This argument over-looks the protection given under Section 136 of the Karnataka Land Reforms Act (for short 'KLR Act'). Section 136 of the K.L.R Act, reads as follows:*

> *"136. Indemnity-No suit or other legal proceeding shall lie against any person in respect of anything which is in good faith done or intended to be done under this Act."*

*The Tribunal is constituted under Section. 48 of the K.L.R Act. Section 48 of the K.L.R Act, reads as follows:*

*"48. CONSTITUTION OF TRIBUNALS:- (1) The State Government shall by notification. Constitute for each Taluk and Tribunal for purposes of this Act consisting of the following members, namely:-*

i. *the Assistant Commissioner of the Revenue Sub-division having jurisdiction over the Taluk or an Assistant Commissioner specially appointed for the purpose by the State Government;*

ii. *Four others nominated by the State Government of whom at least one shall be a person belonging to the Scheduled Castes or Schedule Tribes.*

*(Provided that if in its opinion it is necessary so to do, the State Government my constitute additional Tribunals for any taluk and the Deputy commissioner may subject any general or special orders of the State government distribute the work among the Tribunals in any Taluk).*

*2. The Assistant Commissioner shall be the Chairman of the Tribunal.*

*3. The State Government may from time to time likewise reconstitute the Tribunal, (Any proceedings pending before the Tribunal shall be continued by the reconstituted Tribunals as if the same were instituted before it.*

*removal of a member from or nomination of a member to the Tribunal).*

*4. The quorum to constitute the meeting of the Tribunal and the procedure to be followed by it shall be such as may be prescribed.*

*5. No act or proceeding of the Tribunal shall be deemed to be invalid by reason only of the existence of any vacancy among its members or any defect in the constitution or reconstruction thereof.*

*6. The non-official members of the tribunal shall be entitled to such travelling and other allowance as may be prescribed.*

*7. The Tahasildar (or any officer specially appointed for the purpose by the State Government shall be the Secretary of the Tribunal.*

*8. No legal parctitioner shall be allowed to appear in any proceedings before the Tribunal."*

9. *From the above provision, it is clear that the Tribunal constituted under the K.L.R. Act functions as a collective Body and the decision is collective and where there is difference of opinion, the decision is of the majority. It is necessary to hold that any erroneous order passed by the Tribunal, even if it is an order by the Chairnam, cannot be considered to be his individual order but the order of the Tribunal. Section 112 of the K.L.R Act, provides for duties of Tahasildar and Tribunal. The order itself is explicit that the act of misconduct is alleged to have been committed by the applicant while discharging the*

*duties and functions of the Tribunal and as its Chairman. Sub-clause (d) of Clause-B of Section 112 reads as follows:*

*"(d) to perform such other duties and functions as are imposed on the Tribunal under the provisions of this Act or under any rule made there under."*

*10. The procedure to be followed by the tribunal is provided for in rule 17 of the K.L.R Rules. Under sub-rule (8) of rule 17, it is stated that the order shall be signed, in addition to the Chairman, by the other members of the Tribunal who heard the case. Therefore, any order which is the subject matter of the alleged misconduct is not an order of the Chairman; but by virtue of the procedure prescribed under rule 17 of the K.L.R rules it is the order of the Tribunal.*

*11. We have already extracted Section 136 of the K.L.R Act, which indemnifies every functionary under the Act from any suit or proceeding. As the work proceeding is not defined, therefore, it should include all proceedings including disciplinary proceedings under the CCA Rules. As such we have no doubt whatsoever that the issuance of charge sheet which we have extracted above was clearly without jurisdiction and, therefore, liable to be set-aside. All judicial and quasi-judicial acts which are subject to corrective jurisdiction revisional or otherwise shall be treated only in the manner provided by law and not by restoring to disciplinary action under the provisions of CCA rules which if upheld would amount to direct threat to independence of the judicial or quasi judicial authorities functioning in this State.*

20. ಈ ಮೇಲೆ ಹೇಳಿರುವ ಪ್ರಕರಣವು ಭೂ ನ್ಯಾಯ ಮಂಡಳಿಯ ಆದೇಶದ ವಿರುದ್ಧ ದಾಖಲು ಮಾಡಿರುವ ಪ್ರಕರಣವಾಗಿದ್ದು, ಸದರಿ ಪ್ರಕರಣವು ಅರೆ ನ್ಯಾಯಿಕ (quasi judicial) ಸ್ವರೂಪದ ಅಧಿಕಾರವನ್ನು ಚಲಾಯಿಸಿ ಅಂದಿನ ತಹಶೀಲ್ದಾರ್‌ರವರು ಭೂ ನ್ಯಾಯ ಮಂಡಳಿಯ ಛೇರ್‌ಮ್ಯಾನ್ ನೆಲೆಯಲ್ಲಿ ಮಾಡಿರುವ ಆದೇಶವಾಗಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಮಾಡಿರುವ ಆರೋಪದಲ್ಲಿ ಎದುರುದಾರರು ದೂರುದಾರರ ಅಣ್ಣನಾದ ಶ್ರೀ. ಕೆ. ಎಂ. ನಾಗೇಶ್‌ರವರಿಂದ ರೂ. 3,50,000/- ಲಂಚ ಪಡೆದು ದೂರುದಾರರ ತಂದೆಯ ನಿಜವಾದ ವಾರಿಸುದಾರರನ್ನು ಕೈಬಿಟ್ಟು ಕೇವಲ ಒಬ್ಬ ಮಗನಾದ ನಾಗೇಶ್‌ರವರ ಹೆಸರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದು ಆಪಾದಿಸಿರುತ್ತಾರೆ ಹಾಗೂ ಎದುರುದಾರರು ನಿಜವಾದ ವಾರಿಸುದಾರರ ಬಗ್ಗೆ ಸರಿಯಾಗಿ ಪರಿಶೀಲಿಸದೆ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಕರ್ನಾಟಕ ಭೂ

ಕಂದಾಯ ಕಾಯ್ದೆ ಕಲಂ. 24ರ ಪ್ರಕಾರ ತಹಶೀಲ್ದಾರ್ ಮತ್ತು ಅವರಿಗಿಂತ ಮೇಲಧಿಕಾರಿಗಳು ಮಾತ್ರ ಕಂದಾಯ ನ್ಯಾಯಾಲಯದ ಅರೆ ನ್ಯಾಯಿಕ ಸ್ವರೂಪದ ಅಧಿಕಾರವನ್ನು ಹೊಂದಿರುತ್ತಾರೆ. ಈ ಪ್ರಕರಣದ 2 ರಿಂದ 5ನೇ ಎದುರುದಾರರ ಅಧಿಕಾರವು ಅರೆ ನ್ಯಾಯಿಕ (quasi judicial) ಸ್ವರೂಪದ ಅಧಿಕಾರವಾಗಿರುವುದಿಲ್ಲ. ಮೇಲಾಗಿ ಎದುರುದಾರರ ವಿರುದ್ಧ ಲಂಚ ಆರೋಪವಿರುವುದರಿಂದ ಸದರಿ ಆರೋಪದ ಬಗ್ಗೆ ಮೇಲ್ಮನವಿಯನ್ನು ಪ್ರಶ್ನಿಸಲು ಅವಕಾಶವಿಲ್ಲದಿರುವುದರಿಂದ ಸದರಿ ಲಂಚದ ಆರೋಪದ ಬಗ್ಗೆ ಈ ಪ್ರಾಧಿಕಾರದಿಂದಲೇ ತನಿಖೆ ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪ್ರಸ್ತಾಪಿಸಿರುವ ಕರ್ನಾಟಕ ಆಡಳಿತ ಮಂಡಳಿಯು ಸುದರ್ಶನ್ ಕೆ.ಟಿ.ರವರ ವಿರುದ್ಧ ರಾಜ್ಯ ಸರ್ಕಾರ ತೀರ್ಪು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.

21. ಕರ್ನಾಟಕ ಭೂ ಕಂದಾಯ ನಿಯಮದ ಪ್ರಕಾರ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರಿಗೆ ಖಾತೆ ಬದಲಾವಣೆ ಮಾಡುವಾಗ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಸೂಚಿಸಿರುತ್ತದೆ. ಆದುದರಿಂದ ಕರ್ನಾಟಕ ಭೂ ಕಂದಾಯ ನಿಯಮ 1966 ನಿಯಮ 64 ರಿಂದ 66ನ್ನು ಪರಿಶೀಲಿಸುವುದು ಅವಶ್ಯವಾಗಿರುತ್ತದೆ.

The Rule 64 to 66 of Karnataka Land Revenue Rules reads as follows:

**64. Generation of notices and publication of entries in mutation register**-(1) On receipt of intimation slip in Form 10 or information in Form 19-A or Form 20-A, the Tahasildar shall cause the mutation entry in Form 12 and a notice in Form 21 to be generated in required number using the software specified in sub-rule (1) of Rule 62 and shall send them to the Village Accounts along with the information in Form 10 or Form 19-A or Form 20-A as may be appropriate.

(2) Immediately after receipt of mutation entry in Form 12 from taluk office, the Village Accountant shall enter the details in the above form in mutation register to be maintained in Form 12 of each village.

(3) the Form 12 received from the taluk office shall be exhibited by the Village Accountant in the chavadi for a period of thirty days.

**65. Issue of notices to the persons affected by mutations-** On exhibition of form 12 under sub-rule (3) of Rule 64 and entering details in mutation register, **copies of Form 21 received from taluk office shall be caused to be served on all persons by the Village Accountant as required by sub-section (2) of Section 129. The original notices shall indicate the nature of service in each case and shall be filed with the concerned records.**

**66. Checking of mutations.**-Objections, if any, to the entry is made in the mutation register, may be preferred within thirty days from the date of publication of the entries under sub-rule (3) of Rule 64. **If no objection is received within the period of thirty days, the entries shall be checked and accepted or rejected by the Revenue Inspector.** After the entries are checked and accepted or rejected, such entries shall be sent to the Tahasildar or the authorized officer who shall cause it to be transferred to the Record of Rights Register maintained under sub-rule (1) of Rule 62.

22. ಈ ಮೇಲಿನ ಭೂ ಕಂದಾಯ ಅಧಿನಿಯಮದ ನಿಯಮಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ತಾಲ್ಲೂಕು ಕಛೇರಿಯಿಂದ ಮ್ಯುಟೇಷನ್ ನಮೂದು ಬಗ್ಗೆ ಫಾರಂ ನಂ.12 ಮತ್ತು ಫಾರಂ ನಂ.21ನ್ನು ಗ್ರಾಮ ಲೆಕ್ಕಾಧಿಕಾರಿಯು ಮ್ಯುಟೇಷನ್ ವಹಿಯಲ್ಲಿ ನಮೂದು ಮಾಡಿ ನೋಟೀಸಿನ ಪ್ರತಿಯನ್ನು ಗ್ರಾಮ ಚಾವಡಿಯಲ್ಲಿ ಪ್ರಚುರಪಡಿಸಬೇಕಾಗಿರುತ್ತದೆ ಮತ್ತು ಸದರಿ

ನೋಟೀಸಿನ ಪ್ರತಿಯನ್ನು **ಸಂಬಂಧಪಟ್ಟ ಎಲ್ಲಾ ವಾರೀಸುದಾರರಿಗೆ ಜಾರಿ ಮಾಡಬೇಕಾಗಿರುತ್ತದೆ** ಮತ್ತು ಜಾರಿ ಮಾಡಿದ ಬಗ್ಗೆ ನೋಟೀಸಿನ ಮೂಲ ಪ್ರತಿಯಲ್ಲಿ ನಮೂದಿಸಿ ಕಡತದಲ್ಲಿ ನಮೂದು ಮಾಡಬೇಕಾಗಿರುತ್ತದೆ. ಕಂದಾಯ ನಿರೀಕ್ಷಕರು ಭೂ ಕಂದಾಯ ಅಧಿನಿಯಮ 66ರ ಪ್ರಕಾರ ಫಾರಂ ನಂ. 21ನ್ನು ಪ್ರಚುರಪಡಿಸಿದ 30 ದಿನಗಳ ನಂತರ ಯಾವುದೇ ತಕರಾರು ಸಲ್ಲಿಕೆಯಾಗದಿದ್ದರೆ ನಮೂದುಗಳನ್ನು ಪರಿಶೀಲಿಸಿ ಅನುಮೋದಿಸಲು ಅಥವಾ ನಿರಾಕರಿಸಲು ಅವಕಾಶ ಹೊಂದಿರುತ್ತಾರೆ. ವಂಶವೃಕ್ಷ ಮತ್ತು ಆ ವಂಶವೃಕ್ಷದಂತೆ ಆ ಕುಟುಂಬದಲ್ಲಿರುವ ವಾರಿಸುದಾರರ ಬಗ್ಗೆ ಖಾತ್ರಿಪಡಿಸಿಕೊಂಡ ನಂತರ ಖಾತಾ ಬದಲಾವಣೆ ಬಗ್ಗೆ ಕ್ರಮತೆಗೆದುಕೊಳ್ಳುವುದು ಗ್ರಾಮ ಲೆಕ್ಕಿಗರ ಹಾಗೂ ಕಂದಾಯ ನಿರೀಕ್ಷಕರ ಕರ್ತವ್ಯವಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಗ್ರಾಮ ಲೆಕ್ಕಿಗರಾಗಲೀ, ಕಂದಾಯ ನಿರೀಕ್ಷಕರಾಗಲೀ ಸದರಿ ಖಾತೆ ಬದಲಾವಣೆ ಮಾಡುವ ಮೊದಲು ವಾರಿಸುದಾರರ ಬಗ್ಗೆ ಪರಿಶೀಲಿಸದೆ ಕೇವಲ ಅರ್ಜಿದಾರರು ನೀಡಿರುವ ನೋಟರಿಯವರಿಂದ ದೃಢೀಕರಿಸಿರುವ ವಂಶವೃಕ್ಷದ ಆಧಾರದ ಮೇಲೆ ಖಾತಾ ಬದಲಾವಣೆಯನ್ನು ಮಾಡಿರುತ್ತಾರೆ.

23. ಆದರೆ ಕಾನೂನು ಪ್ರಕಾರ ವಂಶವೃಕ್ಷವನ್ನು ನೀಡುವ ಅಧಿಕಾರ ನೋಟರಿ ವಕೀಲರಿಗೆ ಇರುವುದಿಲ್ಲ. ವಂಶವೃಕ್ಷವನ್ನು ನೀಡುವುದು ಕಂದಾಯ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದರೆ ಎದುರುದಾರರಾದ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಸದರಿ ಅರ್ಜಿಯಲ್ಲಿ ನಮೂದು ಮಾಡಿರುವ ಕೆ.ಎಲ್.ಮಲ್ಲೇಗೌಡರ ನಿಜವಾದ ವಾರಿಸುದಾರರು ಯಾರು ಎಂದು ಪರಿಶೀಲಿಸದೆ ಉಳಿದ ವಾರಿಸುದಾರರನ್ನು ಕೈಬಿಟ್ಟು ಕೇವಲ ಶ್ರೀ. ಕೆ.ಎಂ. ನಾಗೇಶ್‌ರವರ ಹೆಸರಿಗೆ ಮಾತ್ರ ಖಾತೆ ಬದಲಾವಣೆ ಮಾಡಿ

ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ನಮೂನೆ 21ನ್ನು ಹಿತಾಸಕ್ತರಿಗೆ ಜಾರಿ ಮಾಡಿರುವ ಬಗ್ಗೆ ಯಾವುದೇ ಪುರಾವೆಯನ್ನು ಎದುರುದಾರರು ಹಾಜರುಪಡಿಸಿರುವುದಿಲ್ಲ. ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಿಗರು ಕಾನೂನು ಪ್ರಕಾರ ಅರ್ಜಿಯನ್ನು ಪರಿಶೀಲಿಸಿ ವಾರೀಸುದಾರರ ಬಗ್ಗೆ ವಿವರವನ್ನು ಪಡೆಯುವುದು ಇವರ ಕರ್ತವ್ಯವಾಗಿದ್ದರೂ ಈ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡದೇ ವಾರಿಸುದಾರರ ಬಗ್ಗೆ ಸ್ಥಳೀಯರಿಂದ ಪರಿಶೀಲನೆ ನಡೆಸದೆ ಯಾವುದೇ ಮಹಜರ್ ಮಾಡದೇ ಕೇವಲ ಅರ್ಜಿದಾರರು ಸಲ್ಲಿಸಿದ ಅರ್ಜಿಯ ಮೇರೆಗೆ ಖಾತಾ ಬದಲಾವಣೆಗೆ ಮೇಲಾಧಿಕಾರಿಗೆ ಅನುಮೋದನೆಗೆ ಸಲ್ಲಿಸಿ ಗ್ರಾಮ ಲೆಕ್ಕಿಗರು ಹಾಗೂ ಕಂದಾಯ ನಿರೀಕ್ಷಕರಾದ 2 ರಿಂದ 5ನೇ ಎದುರುದಾರರ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಸದರಿ ವಿಚಾರವನ್ನು ಗಮನಿಸಿದಾಗ 2 ರಿಂದ 5ನೇ ಎದುರುದಾರರು ಯಾವುದೇ ಆಮೀಷಕ್ಕೆ ಒಳಪಟ್ಟು ಖಾತಾ ಬದಲಾವಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಖಾತೆ ಬದಲಾವಣೆಯಲ್ಲಿ ಸರಿಯಾದ ವಾರಿಸುದಾರರ ಬಗ್ಗೆ ಮಾಹಿತಿ ಕಲೆಹಾಕುವುದು ಗ್ರಾಮಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರ ಕರ್ತವ್ಯವಾಗಿರುವುದರಿಂದ 1ನೇ ಎದುರುದಾರರ ಪಾತ್ರವು ಸದರಿ ಖಾತೆ ಬದಲಾವಣೆಯಲ್ಲಿ ಇಲ್ಲದಿರುವುದರಿಂದ ಮತ್ತು ಸದರಿ ಖಾತಾ ಬದಲಾವಣೆಯು ವಿಚಾರ 1ನೇ ಎದುರುದಾರರ ಗಮನಕ್ಕೆ ಬಂದ ಕೂಡಲೇ ಸದರಿಯವರು ಮೇಲಾಧಿಕಾರಿಗಳಿಗೆ ವರದಿ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದುದರಿಂದ, 1ನೇ ಎದುರುದಾರರನ್ನು ಈ ಪ್ರಕರಣದಲ್ಲಿ ಕೈಬಿಡಬಹುದಾಗಿರುತ್ತದೆ.

24. ಈ ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ 2 ರಿಂದ 5ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ

ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕರ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

25. ಮೇಲಿನ ಕಾರಣಗಳಿಂದ 2 ರಿಂದ 5ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 2 ರಿಂದ 5ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎರ ಅಡಿಯಲ್ಲಿ ಇಲಾಖಾ ವಿಚಾರಣೆ ಮಾಡಲು 'ಉಪಲೋಕಾಯುಕ್ತರಿಗೆ' ವಹಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

26. ಮುಂದುವರೆದು, 2 ರಿಂದ 5ನೇ ಎದುರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಸ್ವೀಕೃತವಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ನಿರ್ದೇಶಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/6

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತರು–2,**
28/6/21 **ಕರ್ನಾಟಕ ರಾಜ್ಯ.**